INDIAN JOURNAL OF HISTORY AND ARCHAEOLOGY
ISSN (e):2582-225X www.ijha.in
Vol-7, Issue -3, May--June, 2025
PageNo,75-80
Peer -Reviewed, Refereed Journal

# ಶಾಸನಗಳ ಹಿನ್ನೆಲೆಯಲ್ಲಿ ಕೊಳ್ಳೇಗಾಲ ತಾಲ್ಲೂಕಿನ ಜೈನಧರ್ಮ

* ಉಮೇಶ ಎಸ್.[1]

**ಪ್ರೊ.ಎಂ.ಜಿ. ಮಂಜುನಾಥ.[2]

ಮಾನವ ಯಾವುದನ್ನು ಪವಿತ್ರ ಭಾವನೆಯಿಂದ ನೋಡುವನೋ ಅದರೊಡನೆ ಇರಿಸಿಕೊಳ್ಳುವ ಸಂಬಂಧವೇ ಧರ್ಮವೆಂಬ ಶಬ್ದದ ವಿಶಾಲವಾದ ಅರ್ಥ. ಧರ್ಮವು ಸಮಾಜದ ಒಂದು ಅವಿಭಾಜ್ಯ ಅಂಗವಾಗಿದೆ. ಧರ್ಮಕ್ಕೆ ಸಮಾಜದಲ್ಲಿ ತನ್ನದೇಯಾದ ಪ್ರಾಚೀನ ಪರಂಪರೆಯಿದೆ. ಕರ್ನಾಟಕದಲ್ಲಿ ಪ್ರಚಲಿತವಾಗಿದ್ದಷ್ಟು ಧರ್ಮಗಳು ಪ್ರಪಂಚದ ಯಾವುದೇ ಭಾಗದಲ್ಲಿ ಇರಲಿಲ್ಲ. ಕನ್ನಡ ನಾಡಿನ ರಾಜ–ಮಹಾರಾಜರುಗಳು ಅಪಾರವಾದ ಪ್ರೋತ್ಸಾಹ ಹಾಗೂ ಮನ್ನಣೆಯನ್ನು ನೀಡಿ ಧರ್ಮವನ್ನು ಹಾಗೂ ಧಾರ್ಮಿಕ ಆಚರಣೆಗಳನ್ನು ಬೆಳೆಸಿದ್ದಾರೆ. ಕನ್ನಡಿಗರ ವಿಶಾಲವಾದ ಧಾರ್ಮಿಕ ಮನೋಭಾವದಿಂದಲೇ ಹಲವಾರು ಧರ್ಮಗಳು ಹೊರಗಿನಿಂದ ಬಂದು ಇಲ್ಲಿ ಆಶ್ರಯ ಪಡೆದುಕೊಂಡು ತಮ್ಮದೇ ಆದ ಸಂಸ್ಕೃತಿಯನ್ನು ಉಳಿಸಿವೆ. ಈ ಕಾರ್ಯಕ್ಕೆ ರಾಜ–ಮಹಾರಾಜರುಗಳ ಹಾಗೂ ಪ್ರಜೆಗಳು ತುಂಬು ಮನಸ್ಸಿನಿಂದ ಸಹಾಯ ಸಹಕಾರಗಳನ್ನು ನೀಡಿರುವುದು ಕನ್ನಡ ನಾಡಿನಲ್ಲಿ ದೊರೆತ ಶಾಸನಗಳಿಂದ ತಿಳಿದುಬರುತ್ತದೆ.

ಕನ್ನಡ ನಾಡಿನಲ್ಲಿ ಜೈನ, ಬೌದ್ಧ, ಶೈವ, ವೀರಶೈವ, ವೈಷ್ಣವ ಧರ್ಮಗಳಲ್ಲದೆ ಇಸ್ಲಾಂ, ಕ್ರಿಶ್ಚಿಯನ್ ಧರ್ಮಗಳು ತಮ್ಮದೇಯಾದ ಧಾರ್ಮಿಕ ಸಂಸ್ಕೃತಿಯನ್ನು ಈ ನಾಡಿನಲ್ಲಿ ಬಿತ್ತಿವೆ. ಇದಕ್ಕೆ ಕಾರಣ ಪ್ರಾಚೀನ ಕಾಲದ ರಾಜರುಗಳು ತಾವು ಪರಿಪಾಲಿಸುವ ಧರ್ಮವಲ್ಲದೇ ಅನ್ಯ ಧರ್ಮಗಳಿಗೂ ಉದಾರವಾದ ದಾನದತ್ತಿಗಳನ್ನು ನೀಡಿ ಪ್ರೋತ್ಸಾಹಿಸುತ್ತಿದ್ದರು.[1] ರಾಜರು ಸಾಮಾನ್ಯ ಪ್ರಜೆಗಳು ಅನ್ಯಧರ್ಮದವರಿಗೆ ಸಹಾಯ, ಸಹಕಾರ ನೀಡಿರುವುದು ಈ ನಾಡಿನಲ್ಲಿ ದೊರೆತ ಶಾಸನಗಳಿಂದ ತಿಳಿದು ಬರುತ್ತವೆ ಎಂದು ಶಾಸನ ಪರಿಶೋಧಕರಿಂದ ಬೆಳಕು ಕಂಡಿದೆ.

ಕರ್ನಾಟಕಕ್ಕೆ ಜೈನ ಧರ್ಮ ಪ್ರವೇಶ ಮಾಡಿದ್ದು, ಕ್ರಿಸ್ತಪೂರ್ವದಲ್ಲಿಯೇ ಎಂಬುವುದು ಶಾಸನಗಳ ಆಧಾರಗಳಿಂದ ತಿಳಿದು ಬರುತ್ತದೆ. ಜೈನ ಧರ್ಮದ ಇತಿಹಾಸವನ್ನು ಹೊಂದಿರುವ ಕರ್ನಾಟಕದ ದಕ್ಷಿಣ

1.ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಭಾಗ,ಸ್ನಾತಕೋತ್ತರ ಕೇಂದ್ರ, ಹಾಸನ,ಮೈಸೂರು ವಿಶ್ವವಿದ್ಯಾನಿಲಯ.

2.ಪ್ರಾಧ್ಯಾಪಕರು, ಸ್ನಾತಕೋತ್ತರ ಕೇಂದ್ರ, ಹಾಸನ, ಮೈಸೂರು ವಿಶ್ವವಿದ್ಯಾನಿಲಯ.

ಭಾಗಗಳಾದ ಮೈಸೂರು, ಹಾಸನ, ಮಂಡ್ಯ, ಚಾಮರಾಜನಗರ, ಬೆಂಗಳೂರು, ತುಮಕೂರು, ಕೋಲಾರ ಇತ್ಯಾದಿ ಜಿಲ್ಲೆಗಳಲ್ಲಿ ಜೈನಧರ್ಮದ ಕುರುಹುಗಳು ದೊರೆಯುತ್ತವೆ. ಈ ದಕ್ಷಿಣ ಭಾಗದ ಜಿಲ್ಲೆಗಳಲ್ಲಿ ಒಂದಾದ ಚಾಮರಾಜನಗರ ಜಿಲ್ಲೆಯ ಪ್ರಕೃತಿದತ್ತವಾದ ಸೌಂದರ್ಯದ ತಾಣವಾಗಿರುವ ಜಿಲ್ಲೆ. ಕರ್ನಾಟಕ, ಕೇರಳ, ತಮಿಳುನಾಡು ಗಡಿ ಪ್ರಾಂತ್ಯದ ಆಯಕಟ್ಟಿನ ಸ್ಥಳಗಳಲ್ಲಿ ಒಂದಾಗಿದೆ. ಈ ಪ್ರದೇಶವನ್ನು ಗಂಗರು, ಚೋಳರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ಅರಸರು, ಉಮ್ಮತ್ತೂರು ಪಾಳೆಗಾರರು, ಮೈಸೂರು ಅರಸರು, ತೆರಕಣಾಂಬಿ ಪಾಳೆಗಾರರು ಪ್ರಮುಖವಾಗಿ ಆಳಿದ ಮನೆತನಗಳಾಗಿವೆ. ಇಂತಹ ರಾಜರ ಪೋಷಣೆಯಲ್ಲಿ ಜೈನಧರ್ಮ ಜಿಲ್ಲೆಯಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಇವುಗಳ ಕುರುಹಾಗಿ ಹಲವು ಶಾಸನಗಳು ಶಾಸನ ಪರಿಶೋಧಕರಿಂದ ದೊರೆತಿವೆ. ಈ ಜಿಲ್ಲೆಯ ಹಲವು ಗ್ರಾಮಗಳಲ್ಲಿ ಜೈನ ಬಸದಿಗಳು ನಿರ್ಮಾಣವಾಗಿವೆ. ಹಾಗೆ ಅನೇಕ ಜೈನ ಕವಿಗಳು ಸಾಹಿತ್ಯ ರಚನೆ ಮಾಡಿರುವುದು ಕಂಡುಬರುತ್ತದೆ. ಈ ನಿಟ್ಟಿನಲ್ಲಿ ಚಾಮರಾಜನಗರ ಜಿಲ್ಲೆಯ ಪ್ರಮುಖ ತಾಲ್ಲೂಕುಗಳಲ್ಲಿ ಒಂದಾದ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಜೈನಧರ್ಮದ ಶಾಸನಗಳು ಹಾಗೂ ಬಸದಿಗಳ ಆಧಾರಗಳ ಮೂಲಕ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಜೈನಧರ್ಮದ ಪ್ರಭಾವ ಹೇಗಿತ್ತು ಎಂಬುದನ್ನು ತಿಳಿಯಬಹುದು.

ಕೊಳ್ಳೇಗಾಲವು ಸ್ವಾತಂತ್ರ್ಯದ ಪೂರ್ವದಲ್ಲಿ ಹಾಗೂ ಸ್ವಾತಂತ್ರ್ಯ ಬಂದ ನಂತರವೂ 1956 ರವರೆಗೆ ಮದರಾಸ್ ಪ್ರಾಂತ್ಯದ ಪ್ರೆಸಿಡೆನ್ಸಿಯ ಆಡಳಿತದಲ್ಲಿತ್ತು. ಆನಂತರ ಭಾಷಾವಾರು ಪ್ರಾಂತ್ಯದ ಆಧಾರದ ಮೇಲೆ ತಮಿಳುನಾಡು ರಾಜ್ಯ  ದಿಂದ ಕರ್ನಾಟಕಕ್ಕೆ ಸೇರಿಸಲಾಯಿತು. ಕೊಳ್ಳೇಗಾಲಕ್ಕೆ ಈ ಹೆಸರು ಬರಲು ಕಾರಣ 'ಕೌಹಳ' ಮತ್ತು 'ಗಾಳವ' ಎಂಬ ಹೆಸರಿನ ಇಬ್ಬರು ಋಷಿಗಳಿಂದ. ಇವರು ಈ ಪ್ರದೇಶವನ್ನು ಅಭಿವೃದ್ಧಿ ಮಾಡಿದರೆಂದು ನಂಬಲಾಗಿದೆ. ಈ ಪಟ್ಟಣವು ಕರ್ನಾಟಕದ ತಾಲ್ಲೂಕುಗಳಲ್ಲಿ ಒಂದಾಗಿದೆ. ಮುಂಚೆ ಇದೆ ದೊಡ್ಡ ತಾಲ್ಲೂಕಾಗಿತ್ತು. ಇದನ್ನು ವಿಭಾಗ ಮಾಡಿ ಚಾಮರಾಜನಗರ ಜಿಲ್ಲೆಯ ಹೊಸ ತಾಲ್ಲೂಕನ್ನು ಮಾಡಿ ಅದಕ್ಕೆ ಹನೂರನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡಲಾಗಿದೆ. (ಹನೂರು ಚಾಮರಾಜನಗರ ಜಿಲ್ಲೆಯ ಹೊಸ ತಾಲ್ಲೂಕು). ಕೊಳ್ಳೇಗಾಲ ಪಟ್ಟಣದ ಜನಸಂಖ್ಯೆ ಒಂದು ಅಂದಾಜಿನ ಪ್ರಕಾರ 55,432. ಹೀಗೆ ಕೊಳ್ಳೇಗಾಲವು ಕರ್ನಾಟಕ ರಾಜ್ಯದ ಬಹುಮುಖ್ಯವಾದ ಸಂಪದ್ಭರಿತ ತಾಲ್ಲೂಕುಗಳಲ್ಲಿ ಒಂದಾಗಿದೆ.

ದಕ್ಷಿಣ ಭಾರತದ ಜೈನ ಧರ್ಮದ ಇತಿಹಾಸವೆಂದರೆ ಕರ್ನಾಟಕದ ಜೈನ ಧರ್ಮದ ಇತಿಹಾಸವೇ ಆಗಿದೆ ಎಂಬ ವಿದ್ವಾಂಸರ ಹೇಳಿಕೆಗಳನ್ನು ಪ್ರಾಯಶಃ ಎಲ್ಲಾ ವಿದ್ವಾಂಸರು ಒಪ್ಪಿಕೊಳ್ಳುತ್ತಾರೆ. ದಕ್ಷಿಣ ಭಾರತದ ಜೈನಧರ್ಮವು ಕರ್ನಾಟಕದ ಇತಿಹಾಸದೊಂದಿಗೆ ಬೆಳೆಯುತ್ತಾ ತನ್ನದೇಯಾದ ಇತಿಹಾಸವನ್ನು ನಿರ್ಮಿಸಿದ್ದನ್ನು ಇತಿಹಾಸದ ಪುಟಗಳಿಂದ ತಿಳಿದು ಬರುತ್ತದೆ.[2] ಕರ್ನಾಟಕದಲ್ಲಿ ನೂರಾರು ಶಾಸನಗಳು, ಗ್ರಂಥಗಳು ಇತರ ಸಾಂಸ್ಕೃತಿಕ ಆಕರಗಳು ಜೈನಧರ್ಮ ಕರ್ನಾಟಕದ ಸಾಂಸ್ಕೃತಿಕ ಕ್ಷೇತ್ರಕ್ಕೆ ಕೊಟ್ಟ

ಕೊಡುಗೆಗಳನ್ನು ದಾಖಲಿಸಿದೆ. ಈ ಹಿನ್ನೆಲೆಯಿಂದ ಕರ್ನಾಟಕದ ರಾಜಕೀಯ, ಧಾರ್ಮಿಕ, ಸಾಮಾಜಿಕ ಕ್ಷೇತ್ರಗಳಲ್ಲಿ ಜೈನಧರ್ಮದ ಪಾತ್ರ ಅಪಾರವಾದದ್ದು.[3] ಜೈನಧರ್ಮವು ಕ್ರಿಸ್ತ ಪೂರ್ವದಲ್ಲಿ ಉತ್ತರ ಭಾರತದಿಂದ ಕರ್ನಾಟಕಕ್ಕೆ ಬಂದು ಒಂದು ಹೊಸ ಪಂಥವನ್ನು ನಿರ್ಮಿಸಿತು ಮತ್ತು ಕ್ರಮ–ಕ್ರಮವಾಗಿ ಬೆಳೆದು ಸುಮಾರು ಒಂದು ಸಾವಿರ ವರ್ಷಗಳವರೆಗೆ ಒಂದು ಪ್ರಬಲ ಪಂಥವಾಗಿ ನೆಲೆಸಿತು. ಅದು ಕರ್ನಾಟಕದ ಅತ್ಯಂತ ಪ್ರತಿಷ್ಠಿತ ರಾಜ ಮನೆತನಗಳ ಮಾರ್ಗದರ್ಶಿಯಾಗಿ ನಿಂತಿತು. ಜೈನ ಆಚಾರ್ಯರು ಗಂಗ=ಹೊಯ್ಸಳ ಸಾಮ್ರಾಜರನ್ನು ಆಶೀರ್ವದಿಸಿ ಅನುಗ್ರಹ ಪೂರ್ವಕ ಉತ್ತೇಜನವಿತ್ತರು.[4] ಈ ಹಿನ್ನೆಲೆಯಲ್ಲಿ ಜೈನಧರ್ಮ, ಜೈನಾಚಾರ್ಯರು ಮತ್ತು ಕರ್ನಾಟಕದ ಅರಸು ಮನೆತನಗಳ ಸಂಬಂಧ ಅರ್ಥಪೂರ್ಣವಾಗಿಯೇ ಬೆಸೆದುಕೊಂಡಂತೆ ಕಂಡುಬರುತ್ತದೆ. ಕರ್ನಾಟಕದ ಪ್ರಬಲ ಮತ್ತು ಪ್ರಮುಖ ಅರಸು ಮನೆತನಗಳು ಜೈನಧರ್ಮಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ಕೊಟ್ಟಿದ್ದಾರೆ. ಅದರಲ್ಲಿ ಕದಂಬರು, ಗಂಗರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರ ಅರಸರು, ಮೈಸೂರು ಒಡೆಯರು ಸಹ ಜೈನಧರ್ಮಕ್ಕೆ ಪ್ರೋತ್ಸಾಹ ನೀಡಿರುತ್ತಾರೆ. ಅದೇ ರೀತಿ ಸಾಳ್ವರು, ಚೆಂಗಾಳ್ವರು, ಕೊಂಗಾಳ್ವರು, ಸೌದತ್ತಿಯ ರಟ್ಟರು, ಶಿಲಾಹಾರರು, ಕಾರ್ಕಳದ ಬೈರವರಸರು, ಸಾಂತರದಲ್ಲಿಯೂ ಮತ್ತು ತಾಂಜಾವೂರಿನ ಚೋಳರು ಸಹ ಜೈನಧರ್ಮದ ಬೆಳವಣಿಗೆಗೆ ಪ್ರೋತ್ಸಾಹ ನೀಡಿರುತ್ತಾರೆ. ಗಂಗವಾಡಿ 96,000 ಪ್ರಾಂತ್ಯದಲ್ಲಿ ಅಂದರೆ ಮೈಸೂರು ನಾಡಿನಲ್ಲಿ ಗಂಗರಾಜ್ಯದ ಇತಿಹಾಸ ಜೈನಾಚಾರ್ಯರಾದ ಸಿಂಹಣಂದಿಗಳಿಂದ (ಸಿಂಹನಂದಿ) ಪ್ರಾರಂಭವಾಯಿತ್ತೆಂದು ಕರ್ನಾಟಕದ ಅನೇಕ ಶಾಸನಗಳು ಮತ್ತು ಸಾಕ್ಷ್ಯಾಧಾರಗಳಿಂದ ತಿಳಿದುಬರುತ್ತದೆ.

ಗಂಗರ ಆಳ್ವಿಕೆ ಜೈನರ ಸುವರ್ಣಯುಗವೆನ್ನಬಹುದು. ಗಂಗರ ಕಾಲಕ್ಕೆ ರಾಷ್ಟ್ರಧರ್ಮವಾಗಿ ಮೆರೆದ ಜೈನಧರ್ಮವನ್ನು ಕುರಿತಂತೆ ಎಲ್ಲಿ ಜಿನನ ಪೂಜೆಯಾಗುತ್ತದೆಯೋ ಆ ಪ್ರಾಂತ್ಯ, ದೇಶ ವೃದ್ಧಿಯಾಗುತ್ತದೆ. ನಗರಗಳು ನಿರ್ಭಯವಾಗಿರುತ್ತವೆ, ರಾಜನು ಊರ್ಜಿತನಾಗುತ್ತಾನೆ ಎಂಬ ಧೋರಣೆ ಬೆಳೆಯಿತು. ಹೀಗೆ ಗಂಗರ ಕಾಲಕ್ಕೆ ಅತ್ಯುನ್ನತೆಗೇರಿದ ಜೈನಧರ್ಮ ತದನಂತರ ಈ ಮನೆತನದ ಪತನದೊಂದಿಗೆ ಬರಿದಾಯಿತೆಂದು ಹೇಳಬಹುದು. ಒಟ್ಟಾರೆಯಾಗಿ, ಪ್ರಾಚೀನ ಕರ್ನಾಟಕದಲ್ಲಿ ಜೈನಧರ್ಮ ಸಾಕಷ್ಟು ಪ್ರಬಲ ಧರ್ಮವಾಗಿತ್ತು. ಜೈನ ಧರ್ಮದ ಪ್ರಾಚೀನತೆಯನ್ನು ವೇದಗಳ ಕಾಲದಷ್ಟು ಹಿಂದಕ್ಕೆ ಹೋಗುತ್ತದೆ ಎಂದು ಜೈನರು ಭಾವಿಸುತ್ತಾರೆ. ಭಾಗವತ ಪುರಾಣದಲ್ಲಿ ಮೊದಲನೆ ತೀರ್ಥಂಕರನಾದ ವೃಷಭದೇವನ ಉಲ್ಲೇಖವಿದೆ. ಕ್ರಿ.ಪೂ. 3ನೇ ಶತಮಾನದಲ್ಲಿ ಮೌರ್ಯದ ವಂಶದ ಚಕ್ರವರ್ತಿ, ಚಂದ್ರಗುಪ್ತ ಮತ್ತು ಆತನ ಗುರು ಭದ್ರಬಾಹು ಹಾಗೂ ಹನ್ನೆರಡು ಸಾವಿರ ಜೈನ ಮುನಿಗಳು ಉತ್ತರ ಭಾರತದಲ್ಲಿ ಕ್ಷಾಮ ತಲೆದೋರಿದಾಗ ದಕ್ಷಿಣ ಕರ್ನಾಟಕಕ್ಕೆ ಆಗಮಿಸಿ ಈಗಿನ ಶ್ರವಣಬೆಳಗೊಳದಲ್ಲಿ ತಪಸ್ಸು ಮಾಡಿದರೆಂದು ತಿಳಿದುಬರುತ್ತದೆ. ಅಂದಿನಿಂದ ಕರ್ನಾಟಕದಲ್ಲಿ ಜೈನಧರ್ಮವು ಈ ನಾಡನ್ನಾಳಿದ ಅರಸರ ರಾಜಾಶ್ರಯ ಮತ್ತು ಪ್ರೋತ್ಸಾಹದಿಂದಾಗಿ ಅಂದಿನ ಕಾಲದ ಅನ್ಯಧರ್ಮಗಳಿಂದ ಪ್ರಬಲ ಧರ್ಮವಾಗಿ ಬೆಳೆದು

ಬಂದಿತೆಂದು ಹೇಳಬಹುದು. 24ನೇ ತೀರ್ಥಂಕರನ ಮರಣಾನಂತರ ಈ ಧರ್ಮದಲ್ಲಿ ಎರಡು ಪಂಗಡಗಳಾದವು. ಅವುಗಳೆಂದರೆ, ಶ್ವೇತಾಂಬರ ಮತ್ತು ದಿಗಂಬರ. ಕರ್ನಾಟಕದಲ್ಲೂ ದಿಗಂಬರ ಪಂಥವೇ ಪ್ರಬಲವಾಯಿತು. ಈ ಹಿನ್ನೆಲೆಯನ್ನು ಗಮನಿಸಿದಾಗ ಮೈಸೂರು ಜಿಲ್ಲೆ ಮತ್ತು ಚಾಮರಾಜನಗರ ಜಿಲ್ಲೆಗಳನ್ನೊಳಗೊಂಡಂತೆ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಬೆಳೆಯಿತು. ಈ ಪಂಥಕ್ಕೆ ಸೇರಿದ ಆದಿನಾಥ ಬಸದಿ ಕೊಳ್ಳೇಗಾಲ ಬಳಿ ಬಸ್ತೀಪುರದಲ್ಲಿದೆ. ಕ್ರಿ.ಶ.6–7ನೇ ಶತಮಾನದಲ್ಲಿ ಬಸದಿ ಕೇಂದ್ರವಾಗಿತ್ತು. ಇಲ್ಲಿ ಕ್ರಿ.ಶ. ಸುಮಾರು 480ರಲ್ಲಿ ಪೂಜ್ಯಪಾದನೆಂಬ ಜೈನಯತಿ ವಾಸಿಸುತ್ತಿದ್ದ ಉಲ್ಲೇಖವಿದೆ.[5]

ಬಸ್ತಿಪುರದ ಕ್ರಿ.ಶ. 7–8ನೇ ಶತಮಾನದ ಎರಡು ಶಾಸನಗಳು ಜೈನಧರ್ಮದ ವ್ಯಕ್ತಿಗಳ ಬಗ್ಗೆ ತಿಳಿಸುತ್ತವೆ. ಅವುಗಳಲ್ಲಿ ಒಂದಾದ ಶಾಸನ "ಶ್ರೀ ಅತಿಶಯ ಪುಷ್ಪಣನ್ದಿಮುನಿ ಮುಕ್ತಿಯನೆಯ್ದಿದೊಡ ......".[6] ಈ ಶಾಸನದ ಪ್ರಕಾರ ಶ್ರೀ ಪುಷ್ಪನಂದಿ ಮುನಿಯು ಸಲ್ಲೇಖನ ವ್ರತವನ್ನು ಕೈಗೊಂಡು ಮರಣ ಹೊಂದಿದ ನಂತರ ಪುರಿ ಮಂಡಲದ ಬಲದೇವನು ತನ್ನ ಗುರುಗಳಾದ ಪುಷ್ಪನಂದಿ ನಿಷಿಧಿ ಸ್ಥಳವನ್ನು ಬಿಟ್ಟುಹೋಗದೆ ತಾನು 'ಸಲ್ಲೇಖನ ವ್ರತ'ವನ್ನು (ಸಲ್ಲೇಖನ ವ್ರತವು ಜೈನಧರ್ಮದಲ್ಲಿ ದೇಹತ್ಯಾಗ ಮಾಡುವ ಒಂದು ವಿಧಾನವಾಗಿದೆ. ಇದನ್ನು ಸಮಾಧಿ ಮರಣ ಅಥವಾ ಅಂತ್ಯಸಂಸ್ಕಾರ ಎಂದೂ ಕರೆಯುತ್ತಾರೆ. ವೃದ್ಧಾಪ್ಯ, ದೀರ್ಘಕಾಲದ ಅನಾರೋಗ್ಯ ಅಥವಾ ಪ್ರತಿಕಾರವಿಲ್ಲದ ಉಪದ್ರವಗಳಿಂದ ಬಳಲುತ್ತಿರುವಾಗ ಮೋಕ್ಷ ಅಥವಾ ಸದ್ಗತಿಯನ್ನು ಪಡೆಯಲು ಈ ವ್ರತವನ್ನು ಕೈಗೊಳ್ಳಬೇಕಾಗುತ್ತದೆ. ಇದು ಗೃಹಸ್ಥ ಜೀವನದ ಕೊನೆಯ ಹಂತದಲ್ಲಿ ಆಚರಿಸಲಾಗುವ ಒಂದು ವಿಧಿಯಾಗಿದೆ). ಆಚರಿಸಿ ದೇಹತ್ಯಾಗ ಮಾಡಿದನೆಂದು ತಿಳಿಸುತ್ತದೆ. ಶಾಸನದ ಕೊನೆಯಲ್ಲ 'ಶ್ರಾವಕರ' (ಜೈನಧರ್ಮವನ್ನು ಪಾಲಿಸುವವರು ಅಥವಾ ಅನುಯಾಯಿಗಳು) ಎಂಬ ಪದವಿದ್ದು ಇದು ಜೈನಧರ್ಮದ ಅನುಯಾಯಿಗಳನ್ನು ಸೂಚಿಸುತ್ತದೆ.

ಕ್ರಿ.ಶ. 9–10ನೇ ಶತಮಾನದ ಲೊಕ್ಕನಹಳ್ಳಿ ಶಾಸನ

**"ಸ್ವಸ್ತಿ ಶ್ರೀ ಜೋ**
**ಗೆವಳ್ಳ ಬಸವಯ್ಯಂಸನ್ಯ**
**ಸನಂಗೆಯ್ದು ನಾಲ್ಕು ನೋನ್ತು**
**ಮುಡಿಪಿದಂ ಅವರ ಮಗಂ**
**ದೊರಮ್ಮನ್ನಿರೆ ಸಿದ ನಿಷಧಿಗೆ"**[7]

ಈ ಶಾಸನ ನಿಷಿಧಿ ಶಾಸನವಾಗಿದೆ (ನಿಷಿಧಿ ಶಾಸನಗಳು ಎಂದರೆ ಜೈನಧರ್ಮದಲ್ಲಿ ಸಲ್ಲೇಖನ ವ್ರತವನ್ನು ಆಚರಿಸಿ ಮರಣ ಹೊಂದಿದವರ ಸ್ಮರಣಾರ್ಥವಾಗಿ ನೆಡಲಾಗುವ ಸ್ಮಾರಕ ಶಿಲೆಗಳು, ಇವುಗಳನ್ನು ಸಾಮಾನ್ಯವಾಗಿ ವೀರಗಲ್ಲುಗಳಂತೆ ಕೆತ್ತಲಾಗುತ್ತಿತ್ತು). ಜೋಗಿವಳ್ಳ ಬಸವಯ್ಯನ ಜೈನಧರ್ಮ ಆಚಾರ

ವಿಚಾರದಿಂದ ಸನ್ಯಾಸಿಗೈದು (ಸಲ್ಲೇಖನ ವ್ರತ ಆಚರಿಸಿ) ಸಾವನಪ್ಪಿದ್ದಾನೆ. ಹಾಗಾಗಿ ಈತನ ಸ್ಮರಣಾರ್ಥವಾಗಿ ಬಸವಯ್ಯನ ಮಗ ದೊರಮ್ಮನು ನಿಷಿಧಿಕಲ್ಲು ಮಾಡಿಸಿದ್ದಾನೆ.

ಕೊಳ್ಳೇಗಾಲ ತಾಲ್ಲೂಕಿನ ಪ್ರಸಿದ್ಧ ವ್ಯಾಪಾರ–ವ್ಯವಹಾರಗಳ ಕೇಂದ್ರವಾಗಿರುವ ಮುಡಿಗೊಂಡ ಎಂಬ ಊರಿನಲ್ಲಿ ಕ್ರಿ.ಶ. 14ನೇ ಶತಮಾನದ ಶಾಸನದಲ್ಲಿ ಚಂದ್ರಪ್ರಭು ಸ್ವಾಮಿಗಳ ನಖರ ಜಿನಾಲಯದ ಜೀರ್ಣೋದ್ಧಾರಕ್ಕಾಗಿ ಮತ್ತು ದೇವರ ಪೂಜೆಗೆ ಹಾಗೂ ಆಹಾರಕ್ಕಾಗಿ ಗಾವುಂಡರುಗಳು ಭೂಮಿ ಮತ್ತು ತೆರಿಗೆ ಹಣವನ್ನು ದಾನ ಮಾಡಿರುವ ವಿವರವಿದೆ (ಪು . . . ದ್ರ ಪ್ರಭುಸ್ವಾಮಿಗಳ ನಖರ ಜಿನಾಲಯದ ಜೀರ್ಣೋದ್ಧಾರ).[8]

ಕೊಳ್ಳೇಗಾಲದ ಉತ್ತರದಿಕ್ಕಿಗೆ ಇರುವ ಧನಗೆರೆಯಲ್ಲಿಯೂ ಜೈನ ಬಸದಿಯ ಅವಶೇಷಗಳು ಮತ್ತು ಜೈನ ವಿಗ್ರಹಗಳು ದೊರೆತಿವೆ. ಈ ಭಾಗದಲ್ಲಿ ಸಿಕ್ಕಿರುವ ಶಿಲ್ಪವನ್ನು ಶ್ರೀರಂಗಪಟ್ಟಣದ ವಸ್ತುಸಂಗ್ರಹಾಲಯದಲ್ಲಿ ಕಾಣಬಹುದು.[9] ಜೈನಕವಿ – ದೇವಚಂದ್ರ ಕ್ರಿ.ಶ. 1838ರಲ್ಲಿ ಬರೆದಿರುವ ರಾಜಾವಳಿ ಕಥೆಯಲ್ಲಿ ಕೊಳ್ಳೇಗಾಲದ ಪೂರ್ವಕ್ಕೆ ಇರುವ ಮಣಗಳ್ಳಿ ಎಂಬ ಪ್ರದೇಶದಲ್ಲಿ ಸಮುಂತಭದ್ರರೆಂಬ ಜೈನಾಚಾರ್ಯರು ಇದ್ದರೆಂದು ತಿಳಿದು ಬರುತ್ತದೆ.[9] ಈ ಎಲ್ಲಾ ಆಧಾರಗಳಿಂದ ಕೊಳ್ಳೇಗಾಲ ತಾಲ್ಲೂಕು ಜೈನಧರ್ಮದ ಪ್ರಭಾವಕ್ಕೆ ಒಳಗಾಗಿತ್ತೆಂದು ಹೇಳಬಹುದಾಗಿದೆ. ಕೊಳ್ಳೇಗಾಲದಲ್ಲೂ ರಾಘವೇಂದ್ರ ದೇವಾಲಯ ಪಕ್ಕ ಜಿನ ಶಿಲ್ಪವನ್ನು ಗುರುತಿಸಲಾಗಿದೆ. ಈ ಎಲ್ಲಾ ಅಂಶಗಳನ್ನು ಗಮನಿಸಿದರೆ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಕ್ರಿ.ಶ.6–7ನೇ ಶತಮಾನಗಳಿಗಿಂತಲೂ ಸಹ ಜೈನಧರ್ಮವಿತ್ತೆಂದು ತಿಳಿದುಬರುತ್ತದೆ.

**ಅಡಿಟಿಪ್ಪಣಿಗಳು**

1. ಎಸ್.ಎಂ. ಹಿರೇಮಠ : ಶಾಸನಾಧ್ಯಯನ ; 1998, ಪುಟ 94.
2. ಕರ್ನಾಟಕದಲ್ಲಿ ಜೈನಧರ್ಮ ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
3. ಕರ್ನಾಟಕದಲ್ಲಿ ಜೈನಧರ್ಮ ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
4. ಕರ್ನಾಟಕ ಪರಂಪರೆ – ಸಂಪುಟ ಒಂದು
5. ಕನ್ನಡ ವಿಷಯ ವಿಶ್ವಕೋಶ – ಸಂಪುಟ 5 ; ಪುಟ 397.
6. ಎಪಿಗ್ರಾಫಿಯ ಕರ್ನಾಟಿಕ – ಸಂಪುಟ 4 ; ಪುಟ 460.
7. ಎಪಿಗ್ರಾಫಿಯ ಕರ್ನಾಟಿಕ – ಸಂಪುಟ 4 ; ಪುಟ 456.
8. ಎಪಿಗ್ರಾಫಿಯ ಕರ್ನಾಟಿಕ – ಸಂಪುಟ 4 ; ಪುಟ 480–481, ಶಾಸನ ಸಂಖ್ಯೆ 118.
9. ಹ್ಯೂಯೆನ್‌ತ್ಸಾಂಗ್‌ನ ಸಿ.ಯು.ಕಿ ಗ್ರಂಥದ ಆಧಾರದ ಮೇಲೆ.